# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ: ವೈ2(ಇಪ)ಸಂ.ಬೈಂ.04/2013–14 ದಿನಾಂಕ:08.04.2013

______________________

______________________

______________________

______________________

ಮಾನ್ಯರೆ,

**ವಿಷಯ**: ಫಲಿತಾಂಶ ಸಂಪುಟಗಳ ಬೈಂಡಿಂಗ್ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಇತರೆ ಪರೀಕ್ಷೆಗಳ ವ್ಯಾಪ್ತಿಯಲ್ಲಿ ಬರುವ ಫಲಿತಾಂಶ ಪಟ್ಟಿಗಳನ್ನು ಬೈಂಡಿಂಗ್ ಮಾಡಲು ಒಂದು ವ್ಯಾಲ್ಯುಂಗೆ ಎಲ್ಲಾ ತೆರಿಗೆ, ಸಾಗಾಣಿಕೆ ವೆಚ್ಚ ಸೇರಿಸಿ ದಿನಾಂಕ:15.04.2013ರ ಸಾಯಂಕಾಲ 5.00 ಗಂಟೆಯೊಳಗೆ ಸೂಚಿಸಲು ತಿಳಿಸಿದೆ.

**ನಿಬಂಧನೆಗಳು:–**

1. ಸಂಪುಟಗಳನ್ನು ಅರ್ಧ ಕ್ಯಾಲಿಕೋ, ಅರ್ಧ ಲೆದರ್ ಬೈಂಡಿಂಗ್ ಮತ್ತು ಮುಂಭಾಗದ ಮೂಲೆಗಳಿಗೆ ಲೆದರ್ ಬೈಡಿಂಗ್ 40 ಔನ್ಸ್ ಸ್ಟ್ರಾ ಬೋರ್ಡ್ ಬಳಸಿ ಬೈಂಡಿಂಗ್ ಮಾಡಬೇಕು.
2. ಫಲಿತಾಂಶ ಪಟ್ಟಿಯ ಎಲ್ಲಾ ಪುಟಗಳು ಕ್ರಮಬದ್ಧವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಯಾವುದಾದರೂ ಪುಟಗಳು ಮುದ್ರಿತವಾಗಿಲ್ಲದೆ ಇದ್ದಲ್ಲಿ ಅದನ್ನು ಸಂಬಂಧಿಸಿದ ಪರೀಕ್ಷಾ ಶಾಖಾಧಿಕಾರಿಗಳ ಗಮನಕ್ಕೆ ತಂದು ಸದರಿ ಸಂಪುಟಗಳನ್ನು ಮುದ್ರಿಸಿಕೊಂಡು ಸದರಿ ಸಂಪುಟಕ್ಕೆ ಸೇರ್ಪಡೆ ಮಾಡಬೇಕು.
3. ನಿಗಧಿತ ಅವಧಿಯಲ್ಲಿ ಬೈಡಿಂಗ್ ಮಾಡಿ ಸರಬರಾಜು ಮಾಡಬೇಕು. ಸಾಗಾಣಿಕೆ ವೆಚ್ಚ ಪಾವತಿಸುವುದಿಲ್ಲ. ವಿಳಂಬವಾದಲ್ಲಿ ಪ್ರತಿ ದಿನಕ್ಕೆ ರೂ.100–00ರಂತೆ ದಂಡ ವಿಧಿಸಲಾಗುವುದು.
4. ಬೈಂಡಿಂಗ್ ಕಾರ್ಯಕ್ಕೆ ನೀಡುವ ದಾಖಲೆಗಳು ಪ್ರಮುಖ ಹಾಗೂ ಗೌಪ್ಯವಾಗಿರುವುದರಿಂದ ಈ ದಾಖಲೆಗಳ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಾಪಾಡಬೇಕು.
5. ಬೈಂಡಿಂಗ್ ಕಾರ್ಯಕ್ಕೆ ನೀಡುವ ದಾಖಲೆಗಳನ್ನು ಮುಚ್ಚುವುದು, ಬದಲಿಸುವುದು, ತಿದ್ದುಪಡಿಮಾಡುವುದು ಕಂಡು ಬಂದಲ್ಲಿ ಕ್ರಿಮಿನಲ್ ಮೊಕದ್ದಮೆಗೆ ಮತ್ತು ವಿಧಿಸುವ ದಂಡಕ್ಕೆ ಒಳಪಡಬೇಕಾಗಿರುತ್ತದೆ.
6. ಫಲಿತಾಂಶ ಪಟ್ಟಿಯ ಎಲ್ಲಾ ಪುಟಗಳು ಶಾಖಾಧಿಕಾರಿಗಳು ನೀಡುವ ಸೂಚನೆಯಂತೆ ಒಂದೇ ಸಂಪುಟದಲ್ಲಿರಬೇಕು.
7. ಮುಂಗಡ ಪಾವತಿಸುವುದಿಲ್ಲ. ಆದಾಯ ತೆರಿಗೆ ಕಟಾಯಿಸಿ ಫಾರಂ 16ಎ ನೀಡಲಾಗುವುದು.
8. ತಯಾರಿಸುವ ಸಂಪುಟದ ಮಾದರಿಯನ್ನು ಕಛೇರಿ ವೇಳೆಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ತಮ್ಮ ನಂಬುಗೆಯ

ಸಹಿ/–

ನಿರ್ದೇಶಕರು (ಇ.ಪ) ರವರ ಆದೇಶದ ಮೇರೆಗೆ

ನಿರ್ದೇಶಕರ ಪರವಾಗಿ

(ಇತರೆ ಪರೀಕ್ಷೆಗಳು)